**ಕರ್ನಾಟಕ ಸರ್ಕಾರ**

ಸಂಖ್ಯೆ: ಸಂವ್ಯಶಾಇ 33 ಶಾಸನ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 06.01.2018.

**ಅಧಿಸೂಚನೆ**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2017ಕ್ಕೆ 2018ರ ಜನವರಿ ತಿಂಗಳ 04ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 01 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

XX XX XX

(XX ಲಗತ್ತಿಸಲಾದ ವಿಷಯವನ್ನು ಇಲ್ಲಿ ಸೇರಿಸತಕ್ಕದ್ದು)

1. ಕರ್ನಾಟಕ ರಾಜ್ಯಪತ್ರದ ಸಂಕಲನಕಾರರು, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ IV-A ದಲ್ಲಿ ದಿನಾಂಕ: 06.01.2018 ರಂದು ಪ್ರಕಟಿಸಬೇಕೆಂದು ಕೋರಿದೆ. ಇದರ ಮುದ್ರಿತ ಬಿಡಿ ಪ್ರತಿಗಳನ್ನು ವಾಡಿಕೆಯ ಕ್ರಮದಂತೆ **250** ಪ್ರತಿಗಳನ್ನು ಪ್ರಾರೂಪಣಾ ಶಾಖೆ, ಸಂಸದೀಯ ವ್ಯವಹಾರಗಳ ಇಲಾಖೆಗೂ, **500 ಪ್ರತಿಗಳನ್ನು ನೇರವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೂ** ಮತ್ತು ತಲಾ 50 ಪ್ರತಿಗಳನ್ನು ಈ ಇಲಾಖೆಯ ಪ್ರಕಟಣೆ ಮತ್ತು ಕ್ರೋಢೀಕರಣ ಶಾಖೆಗೂ ಕಳುಹಿಸಿ ಕೊಡತಕ್ಕದ್ದು.

2. ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು. **(ಪ್ರಸ್ತಾವಿತ ತಿದ್ದುಪಡಿ ಅಧಿನಿಯಮದ 500 ಪ್ರತಿಗಳನ್ನು ನೇರವಾಗಿ ಮುದ್ರಣಾಲಯದಿಂದ ಪಡೆದುಕೊಳ್ಳುವಂತೆ ಕೋರಲಾಗಿದೆ) (ಆಕುಕ 115 ಎಫ್‌ಪಿಆರ್ 2016)**
2. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿ
3. ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (ಮೇಲ್ಪತ್ರದೊಂದಿಗೆ)
4. ಸಚಿವ ಸಂಪುಟ ಶಾಖೆ. (ಸಿ: 382 & 736 / 2017)
5. ಪ್ರಕಟಣಾ ಶಾಖೆ : ಕ್ರೋಢೀಕರಣ ಶಾಖೆ 1 & 2, ಸಂಸದೀಯ ವ್ಯವಹಾರಗಳ ಇಲಾಖೆ.
6. ಬಿಡಿ ಪ್ರತಿಗಳು.

2018 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01

(2018ರ ಜನವರಿ ತಿಂಗಳ 06ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017

(2018ರ ಜನವರಿ ತಿಂಗಳ 04ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ರ (2007ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (ಎಫ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(ಎಫ್-1) "ಕುಂದುಕೊರತೆ" ಎಂದರೆ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಚಾರ್ಟರನ್ನು ಪಾಲಿಸದೇ ಇರುವ ಸಂಬಂಧದಲ್ಲಿಯ ಯಾವುದೇ ದೂರು;"

(ii) (ಎಚ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(ಎಚ್) "ಪರಿಶೀಲನಾ ಸಮಿತಿ" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಪರಿಶೀಲನಾ ಸಮಿತಿ;"

(iii) (ಎಲ್) ಖಂಡದಲ್ಲಿ "ಆಕ್ಯುಪ್ರೆಷರ್ ಚಿಕಿತ್ಸೆಗಳನ್ನು ಒಳಗೊಳ್ಳುತ್ತದೆ" ಎಂಬ ಪದಗಳಿಗೆ "ಆಕ್ಯುಪ್ರೆಷರ್ ಚಿಕಿತ್ಸೆಗಳನ್ನು ಹಾಗೂ ನಿಯಮಿಸಬಹುದಾದ ಯಾವುದೇ ಇತರ ಚಿಕಿತ್ಸಾ ವಿಧಾನವನ್ನು ಒಳಗೊಳ್ಳುತ್ತದೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (ಎಮ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಂ-1) "ರೋಗಿಯ ಚಾರ್ಟರ್ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಚಾರ್ಟರ್" ಎಂದರೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ರೋಗಿಯ ಮತ್ತು ಖಾಸಗಿ ವೈದ್ಯಕೀಯ ಸಂಸ್ಥೆಗಳ ಹಕ್ಕುಗಳು ಮತ್ತು ಜವಾಬ್ದಾರಿಗಳು;"

(ಎಂ-2) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಮಾಡಲಾದ ನಿಯಮಗಳ ಮೂಲಕ ನಿಯಮಿಸಲಾದುದು."